ಈ ಲೇಖನದ ವಿಷಯಾನುಕ್ರಮಣಿಕೆ


ನಿರ್ಮಾಲ್ಯವಿಸರ್ಜನೆಯ ಸಮಯ 2

ಪದ್ಯಮಾಲಾ ವಚನ 3

ವರಾಹಪುರಾಣದ ವಚನ 6

ಮಧ್ವವಿಜಯದ ವಚನ 6

ಸಂನ್ಯಾಸಪದ್ಧತಿಯ ವಚನ 7

ಪಂಚರಾತ್ರದ ವಚನ 8

ಪದ್ಯಮಾಲಾ ವಿರೋಧ ಪರಿಹಾರ 11

ಬೆಳಿಗ್ಗೆ ಮಾಡದಿದ್ದಲ್ಲಿ ಮಧ್ಯಾಹ್ನ ಮಾಡಲೇಬೇಕು 12

ಬೆಳಿಗ್ಗೆ ಅರ್ಪಿಸಿದ ತುಳಸಿಯನ್ನು ತೆಗೆಯಬೇಕು 14

ಎಲ್ಲದರ ಸಂಗ್ರಹ 17

## ವಿಶ್ವನಂದಿನಿ ಲೇಖನಮಾಲೆ — 4

### ನಿರ್ಮಾಲ್ಯವಿಸರ್ಜನೆಯ ಸಮಯ

ನಿರ್ಮಾಲ್ಯವಿಸರ್ಜನೆ ಮಾಡುವದಕ್ಕಿಂತ ಮೊದಲಿನ ಸ್ನಾನದಲ್ಲಿ ಕೇವಲ ನೀರಿನಿಂದ ಗೋಪೀಧಾರಣೆ, ಅಥವಾ ಸುದರ್ಶನತೀರ್ಥದಿಂದ ಗೋಪೀಧಾರಣೆ, ಪೂಜೆಗಾಗಿ ಸ್ನಾನ ಮಾಡಿದಾಗ ನಿರ್ಮಾಲ್ಯತೀರ್ಥದಿಂದ ಗೋಪೀಧಾರಣೆ ಎಂಬ ವಿಷಯವನ್ನು ಹಿಂದಿನ ಲೇಖನದಲ್ಲಿ ತಿಳಿದುಕೊಂಡೆವು.

ಈಗ ನಿರ್ಮಾಲ್ಯವಿಸರ್ಜನೆಯನ್ನೇ ಪೂಜೆ ಮಾಡುವಾಗ ಮಾಡಬೇಕು, ಅರುಣೋದಯಕಾಲದಲ್ಲಿ ಮಾಡಲೇಬೇಕು ಎಂಬ ನಿಯಮವಿಲ್ಲ ಎಂಬ ಆಕ್ಷೇಪಕ್ಕೆ ಪರಿಹಾರವನ್ನು ಕಂಡುಕೊಳ್ಳೋಣ.

## ಪದ್ಯಮಾಲಾ ವಚನ

ಮೇಲಿನ ಆಕ್ಷೇಪವನ್ನು ಮಾಡುವವರು ಶ್ರೀಮಟ್ಟೀಕಾಕೃತ್ಪಾದರು ರಚನೆ ಮಾಡಿರುವ ಪದ್ಯಮಾಲಾಗ್ರಂಥದ ವಚನವನ್ನು ಆಧಾರವನ್ನಾಗಿ ನೀಡುತ್ತಾರೆ.

ಆ ಕೃತಿಯಲ್ಲಿ ದ್ವಾರಪಾಲಕ ನಮನ, ಬ್ರಹ್ಮಪಾರಸ್ತವ, ಗಂಟಾನಾದಗಳಾದ ಬಳಿಕ, ಕಲಶ ಪೂಜೆಯ ಮೊದಲು ನಿರ್ಮಾಲ್ಯ ವಿಸರ್ಜನೆಯನ್ನು ಮಾಡಬೇಕೆಂದಿದೆ.

**ತತೋ ಜವನಿಕಾಂ ತ್ಯಕ್ತ್ವಾ**
**ನಿರ್ಮಾಲ್ಯಂ ವಿಸೃಜೇತ್ ತತಃ**

ಎಂದು.

ಯಾವ ‘ಕ್ರಮ’ದಲ್ಲಿ ಪೂಜೆಯನ್ನು ಮಾಡಬೇಕು ಎಂದು ತಿಳಿಸುತ್ತಿರುವ ಟೀಕಾಕೃತ್ಪಾದರು ಮೊದಲ ಹದಿನೇಳು ಶ್ಲೋಕಗಳಲ್ಲಿ ದೇವಪೂಜೆಯ ಸಿದ್ಧತೆ, ತುಳಸೀಪುಷ್ಪಗಳ ಸಂಗ್ರಹ ದೇವಗೃಹಪ್ರವೇಶ, ದೀಪಪ್ರಜ್ವಾಲನೆ, ಭೂತೋಚ್ಚಾಟನೆ,

ಮಾನುಷಗಂಧನಿವಾರಣೆ, ಪರದೆಯ ಕಲ್ಪನೆ, ಬ್ರಹ್ಮಪಾರಸ್ತವದ ಪಠಣ, ಘಂಟಾನಾದಗಳನ್ನು ಹೇಳಿ ನಿರ್ಮಾಲ್ಯ ವಿಸರ್ಜನೆಯನ್ನು ಹೇಳುತ್ತಿದ್ದಾರೆ. ಆ ನಂತರ ಕಲಶ ಪೂಜೆಯನ್ನು ಹೇಳಿದ್ದಾರೆ. ಹೀಗಾಗಿ ನಿರ್ಮಾಲ್ಯವಿಸರ್ಜನೆಯನ್ನು ಸೂರ್ಯೋದಯಕ್ಕಿಂತ ಮುಂಚೆಯೇ ಮಾಡಬೇಕೆಂದಿಲ್ಲ. ತುಳಸ್ಯಾದಿಗಳ ಸಂಗ್ರಹವನ್ನು ಮಾಡಿಕೊಂಡು ದೇವರ ಪೂಜೆ ಮಾಡುವದಕ್ಕಿಂತ ಮುಂಚೆ ಮಾಡಿದರೆ ಸಾಕು ಎಂದು ಕೆಲವರ ಪಕ್ಷ.

ಸ್ಮೃತಿಮಾಣಿಕ್ಯ ಸಂಗ್ರಹದಲ್ಲಿಯೂ ಸಹ ಮಧ್ಯಾಹ್ನದ ಪೂಜೆಯ ವೇಳೆಯಲ್ಲಿಯೇ ನಿರ್ಮಾಲ್ಯ ವಿಸರ್ಜನೆಯನ್ನು ಹೇಳಿದ್ದಾರೆ.

ಆದರೆ, ಟೀಕಾಕೃತ್ಪಾದರ ಅಭಿಪ್ರಾಯ ಹೀಗಿಲ್ಲ. ಪದ್ಯಮಾಲಾಕ್ಕೆ ವ್ಯಾಖ್ಯಾನ ಮಾಡಿದ ಶ್ರೀ ಛಲಾರೀ ಶೇಷಾಚಾರ್ಯರು ಇದರ ಕುರಿತು ವಿಸ್ತಾರವಾದ ಚರ್ಚೆಯನ್ನು ಮಾಡಿ ಟೀಕಾಕೃತ್ಪಾದರ ಅಭಿಪ್ರಾಯವನ್ನು ತಿಳಿಸಿದ್ದಾರೆ.

ನಾವು ಯಾವುದೇ ವಿಷಯವನ್ನು ಅರ್ಥ ಮಾಡಿಕೊಳ್ಳಬೇಕಾದರೂ ಅದಕ್ಕೆ ಸಂಬಂಧಪಟ್ಟ ಎಲ್ಲ ವಾಕ್ಯಗಳನ್ನೂ ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ಮತ್ತು, ಯಾವ ವಾಕ್ಯಗಳನ್ನೂ ಕಡೆಗಣಿಸುವಂತಿಲ್ಲ.

ದೇವರು ಯಾರು ಎಂದು ನಿರ್ಣಯಸಬೇಕಾದರೂ ವೇದ ವಿರುದ್ಧವಾದ ವಾಕ್ಯಗಳನ್ನು ಅಪ್ರಮಾಣ ಎಂದು ನಿರ್ಣಯಿಸಿ, ವೇದಗಳಲ್ಲಿಯೇ ವಿರುದ್ಧವಾಗಿ ತೋರುವ ವಾಕ್ಯಗಳನ್ನು ಪರಸ್ಪರ ವಿರೋಧವಿಲ್ಲದಂತೆ ವ್ಯಾಖ್ಯಾನ ಮಾಡಿ ಅರ್ಥ ನಿರ್ಣಯ ಮಾಡುತ್ತಾರೆ ಶ್ರೀಮದಾಚಾರ್ಯರು.

ಈಗಲೂ ಅದೇ ಕ್ರಮದಲ್ಲಿ ನಾವು ವಿಚಾರ ಮಾಡಬೇಕು.

ಮೊದಲಿಗೆ ಎಲ್ಲ ವಚನಗಳನ್ನು ಕೂಲಂಕಷವಾಗಿ ತಿಳಿಯೋಣ.

## ವರಾಹಪುರಾಣದ ವಚನ

ಸೂರ್ಯೋದಯಕ್ಕಿಂತ ಮುಂಚೆಯೇ ನಿರ್ಮಾಲ್ಯ ವಿಸರ್ಜನೆಯನ್ನು ಮಾಡಬೇಕು ಎಂದು ವರಾಹಪುರಾಣದಲ್ಲಿ ಭಗವಂತನ ವಚನವಿದೆ —

> **ನಿರ್ಮಾಲ್ಯಂ ಮದ್ವಪುರ್ಲಗ್ನಂ**
> **ಪ್ರಾತರೇವ ವಿವಾಸಯೇತ್**

## ಮಧ್ವವಿಜಯದ ವಚನ

ಶ್ರೀಮದಾಚಾರ್ಯರೂ ಸಹ ಇದೇ ಕ್ರಮವನ್ನು ಅನುಸರಿಸುತ್ತಿದ್ದರು ಎಂದು ಮಧ್ವವಿಜಯ ತಿಳಿಸುತ್ತದೆ[1].

> **ವಿಪುಲಹೃದಯಪಾರ್ಶ್ವೇ**
> **ದೀಪದೀಪದೀಪ್ತಿಪ್ರದೀಪ್ತೇ**
> **ದರವರಪರಿಪೂರ್ಣೈಃ**
> **ವಾರ್ಭಿರರ್ಘ್ಯಾದಿ ದತ್ವಾ ।**

---

[1] ಅರ್ಥವನ್ನು ಹಿಂದಿನ ಲೇಖನದಲ್ಲಿ ಮತ್ತು ಮಧ್ವವಿಜಯದ ಉಪನ್ಯಾಸದಲ್ಲಿ [VNU3019,VNU311] ವಿಸ್ತೃತವಾಗಿ ತಿಳಿಸಿದ್ದೇನೆ.

**ಯತಿರತಿಯತಚೇತಾಃ**
**ಚಕ್ರಿಣೋರ್ಚಾನಿಕಾಯಾತ್**
**ಕುಸುಮಸಮಿತಿಮಗ್ರ್ಯಾಂ**
**ಆದರಾದುಜ್ಜಹಾರ ||**

## ಸಂನ್ಯಾಸಪದ್ಧತಿಯ ವಚನ

ಶ್ರೀಮಧ್ವಾನುಜಾಚಾರ್ಯರು ಮೊದಲಿಗೆ ಸ್ನಾನ, ಆ ನಂತರ ಗೋಪೀಧಾರಣೆ, ಆ ನಂತರ ನಿರ್ಮಾಲ್ಯ ವಿಸರ್ಜನೆಯ ಕ್ರಮವನ್ನು ತಿಳಿಸುತ್ತಾರೆ —

**ಹಂಸಾದೀನಾಂ ಯತೀನಾಂ ಚ**
**ಬ್ರಹ್ಮಚಾರ್ಯಾದಿನಾಮಪಿ |**
**ಪೂರ್ವೋಕ್ತೇನೈವ ಮಾರ್ಗೇಣ**
**ಭವೇತ್ ಸ್ನಾನವಿಧಿಃ ಪರಃ || 33 ||**

**ಮೃದಾ ಗೋಪಿಕಯಾ ಚೋರ್ಧ್ವ-**
**ಪುಂಡ್ರಂ ಕುರ್ಯಾತ್ ಸಮಾಹಿತಃ || 34**

**ತ್ಯಕ್ತ್ವಾ ಪುಷ್ಪಾಣಿ ಶಿರಸಿ**
**ಧಾರಯನ್ ಕರ್ಣಯೋರಪಿ |**

**ಜಿಘ್ರೇತ್ ಪೌರಾಣಿಕಾನ್ ಶ್ಲೋಕಾನ್**
**ಪ್ರಾಮಾಣ್ಯಾಯ ವದಾಮಿ ಚ || 64[2] ||**

## ಪಂಚರಾತ್ರದ ವಚನ

ನಿರ್ಮಾಲ್ಯಕ್ಕಾಗಿ ವಿಹಿತವಾಗಿರುವ ಕಾಲವನ್ನು ಮೀರಿ ನಿರ್ಮಾಲ್ಯವನ್ನು ಮಾಡದಿದ್ದಲ್ಲಿ ಉಂಟಾಗುವ ಅನರ್ಥಗಳನ್ನು ಪಂಚರಾತ್ರ ತಿಳಿಸುತ್ತದೆ —

**ಅರುಣೋದಯವೇಲಾಯಾಂ**
**ನಿರ್ಮಾಲ್ಯಂ ಶಲ್ಯತಾಂ ವ್ರಜೇತ್ |**
**ಪ್ರಾತಸ್ತು ಸ್ಯಾನ್ಮಹಾಶಲ್ಯಂ**
**ಘಟಿಕಾಮಾತ್ರಯೋಗತಃ |**

**ಅತಿಶಲ್ಯಂ ವಿಜಾನೀಯಾತ್**
**ತತೋ ವಜ್ರಪ್ರಹಾರವತ್ ||**

**ಅರುಣೋದಯವೇಲಾಯಾಂ**
**ಶಲ್ಯಂ ತತ್ ಕ್ಷಮತೇ ಹರಿಃ |**

---

[2] ಮಧ್ಯದ ಶ್ಲೋಕಗಳಲ್ಲಿ ಗೋಪಚಂದನದ ಮಹಿಮಾದಿಗಳ ನಿರೂಪಣೆಯಿದೆ.

**ಘಟಿಕಾಯಾ ಅತಿಕ್ರಾಂತೌ**
**ಕ್ಷುದ್ರಂ ಪಾತಕಮಾವಹೇತ್||**

**ಮುಹೂರ್ತೇ ಸಮತಿಕ್ರಾಂತೇ**
**ಪೂರ್ಣಂ ಪಾತಕಮುಚ್ಯತೇ|**
**ತತಃ ಪರಂ ಬ್ರಹ್ಮವಧೋ**
**ಮಹಾಪಾತಕಪಂಚಕಮ್ |**
**ಪ್ರಹರೇ ಪೂರ್ಣತಾಂ ಯಾತೇ**
**ಪ್ರಾಯಶ್ಚಿತ್ತಂ ತತೋ ನಹಿ ||**

ಅರುಣೋದಯದಿಂದ ಸೂರ್ಯೋದಯದವರೆಗೆ ದೇವರ ಮೇಲಿರುವ ನಿರ್ಮಾಲ್ಯ ಒಂದು ಆಯುಧಪ್ರಹಾರದಂತೆ. ಅದನ್ನು ತೆಗೆಯಬೇಕು. ಸೂರ್ಯೋದಯದ ವರೆಗೆ ಶ್ರೀಹರಿ ಅದನ್ನು ಕ್ಷಮಿಸುತ್ತಾನೆ.

ಸೂರ್ಯೋದಯವಾದ ಮೇಲೆ 24 ನಿಮಿಷಗಳ ಕಾಲ ದೇವರ ಮೇಲೆ ಹಿಂದಿನ ದಿವಸದ ನಿರ್ಮಾಲ್ಯವಿದ್ದರೆ ಭಾರೀ ಭಲ್ಲೆಯಿಂದ ದೇವರನ್ನು ಹೊಡೆದಂತೆ.

25ನೆಯ ನಿಮಿಷದಿಂದ 48ನೆ ನಿಮಿಷದ ವರೆಗೆ ದೇವರ ಮೇಲೆ ಹಿಂದಿನ ದಿವಸದ ನಿರ್ಮಾಲ್ಯವಿದ್ದರೆ ಅತಿಶಲ್ಯಘಾತದ ಪಾಪ.

48 ನಿಮಿಷ ಕಳೆದ ಮೇಲೂ ನಿರ್ಮಾಲ್ಯವಿದ್ದರೆ ಅದು ದೇವರಿಗೆ ವಜ್ರಾಯುಧದಿಂದ ಹೊಡೆದ ಪಾಪವನ್ನು ನೀಡುತ್ತದೆ. ಬ್ರಹ್ಮಹತ್ಯೆ, ಸುರಾಪಾನ, ಗುರುಸ್ತ್ರೀಗಮನ, ಬಂಗಾರದ ಕಳ್ಳತನ ಮತ್ತು ಇದನ್ನು ಮಾಡಿದವರ ಸಂಗ ಮಾಡಿದರೆ ಏನು ದುಷ್ಫಲ ಉಂಟಾಗುತ್ತದೆಯೋ ಅಷ್ಟು ದುಷ್ಫಲ ಉಂಟಾಗುತ್ತದೆ.

ಸೂರ್ಯೋದಯವಾಗಿ ಮೂರು ಗಂಟೆಯಾದ ಮೇಲೂ ನಿರ್ಮಾಲ್ಯವಿದ್ದರೆ ಅದಕ್ಕೆ ಪ್ರಾಯಶ್ಚಿತ್ತವೇ ಇಲ್ಲ.

ಹೀಗೆ ಬೆಳಗಿನ ಜಾವದಲ್ಲಿಯೇ ನಿರ್ಮಾಲ್ಯ ವಿಸರ್ಜನೆಯ ಅನಿವಾರ್ಯತೆಯನ್ನು ಶಾಸ್ತ್ರ ತಿಳಿಸಿ ಹೇಳುತ್ತದೆ.

## ಪದ್ಯಮಾಲಾ ವಿರೋಧ ಪರಿಹಾರ

ಮೊದಲಿಗೆ ಸೂರ್ಯೋದಯಕ್ಕಿಂತ ಮುಂಚೆ ನಿರ್ಮಾಲ್ಯ ವಿಸರ್ಜನೆ ಮಾಡಬೇಕು ಎನ್ನುವದಕ್ಕೆ ಹತ್ತಾರು ವಚನಗಳಿವೆ.

ಸ್ವಯಂ ಶ್ರೀಮದಾಚಾರ್ಯರು ಹಾಗೆ ಆಚರಿಸಿದ್ದಾರೆ.

ಶ್ರೀಮಧ್ವಾನುಜಾಚಾರ್ಯರ ವಚನವೂ ಪ್ರಮಾಣವಿದೆ.

ಎರಡನೆಯದು ಸೂರ್ಯೋದಯದ ನಂತರ ನಿರ್ಮಾಲ್ಯ ವಿಸರ್ಜನೆ ಮಾಡಿದಲ್ಲಿ ಮಹತ್ತರ ಪಾಪಗಳನ್ನು ಹೇಳುವ ವಾಕ್ಯಗಳಿವೆ.

ಮೂರನೆಯದು ದೇವರ ಪೂಜೆಯ ಸಂದರ್ಭದಲ್ಲಿ ನಿರ್ಮಾಲ್ಯ ವಿಸರ್ಜನೆ ಮಾಡಬೇಕು ಎಂದು ಟೀಕಾಕೃತ್ಪಾದರು ಹೇಳುತ್ತಿದ್ದಾರೆ.

ಟೀಕಾಕೃತ್ಪಾದರು ಶ್ರೀಮದಾಚಾರ್ಯರ ವಿರುದ್ಧವಾಗಿ ಹಾಗೂ ಶಾಸ್ತ್ರಕ್ಕೆ ವಿರುದ್ಧವಾಗಿ

ಹೇಳಲು ಸಾಧ್ಯವೇ ಇಲ್ಲ. ಹಾಗಾದರೆ ಟೀಕಾಕೃತ್ಪಾದರ ವಾಕ್ಯದ ಅಭಿಪ್ರಾಯವೇನು?

ಆ ಮಹಾಗುರುಗಳ ಪಾದಗಳನ್ನು ಭಕ್ತಿಯಿಂದ ಸ್ಮರಿಸಿ ಅವರ ಅಭಿಪ್ರಾಯವನ್ನು ತಿಳಿಯುವ ಪ್ರಯತ್ನವನ್ನು ಮಾಡೋಣ.

## ಬೆಳಿಗ್ಗೆ ಮಾಡದಿದ್ದಲ್ಲಿ ಮಧ್ಯಾಹ್ನ ಮಾಡಲೇಬೇಕು

ಶ್ರೀ ಛಲಾರೀ ಶೇಷಚಾರ್ಯರು ತಮ್ಮ ಹಿಂದಿನ ವ್ಯಾಖ್ಯಾನಕಾರರು ನೀಡಿರುವ ಪರಿಹಾಗಳನ್ನು ಹೀಗೆ ಸಂಗ್ರಹಿಸಿದ್ದಾರೆ —

**ಯಾರಿಗೆ ಬೆಳಿಗ್ಗೆ ನಿರ್ಮಾಲ್ಯ ವಿಸರ್ಜನೆ ಮಾಡಲು ಸಾಧ್ಯವಾಗಿಲ್ಲವೋ, ಅವರು ಪೂಜೆಯ ವೇಳೆಯಲ್ಲಿ ನಿರ್ಮಾಲ್ಯ ವಿಸರ್ಜನೆ ಮಾಡುವಾಗ ದ್ವಾರಪಾಲಾದಿ ನಮನಗಳನ್ನು ಮಾಡಿಯೇ ನಿರ್ಮಾಲ್ಯ ವಿಸರ್ಜನೆ ಮಾಡಬೇಕು ಎನ್ನುವದಕ್ಕಾಗಿ ಇಲ್ಲಿ ನಿರ್ಮಾಲ್ಯ ವಿಸರ್ಜನೆಯನ್ನು ಟೀಕಾಕೃತ್ಪಾದರು ಹೇಳಿದ್ದಾರೆ.**

ತುಂಬ ಮಹತ್ತ್ವದ ವಿಷಯವಿದು. ಯಾವುದೋ ಅನಿವಾರ್ಯ ಕಾರಣಕ್ಕೆ ನಮಗೆ ಬೆಳಿಗ್ಗೆ ನಿರ್ಮಾಲ್ಯ ವಿಸರ್ಜನೆ ಮಾಡಲು ಸಾಧ್ಯವೇ ಇಲ್ಲ.

ಮಧ್ಯಾಹ್ನ ಮಾಡಿದಲ್ಲಿ ಪ್ರಾಯಶ್ಚಿತ್ತವೇ ಇಲ್ಲದ ಪಾಪವದು ಎಂದು ಶಾಸ್ತ್ರ ಹೇಳುತ್ತದೆ. ಹಾಗಾದರೆ ಇಡಿಯ ದಿವಸ ಪೂಜೆ ಮಾಡದೇ ಇರಬೇಕೇನು ಎಂದರೆ, ಇಲ್ಲ, ಪೂಜೆ ಮಾಡಲೇಬೇಕು, ಪೂಜೆಗಿಂತ ಮೊದಲು ನಿರ್ಮಾಲ್ಯ ವಿಸರ್ಜನೆಯನ್ನು ಮಾಡಬೇಕು ಎನ್ನುವದನ್ನು ಟೀಕಾಕೃತ್ಪಾದರು ತಿಳಿಸುತ್ತಿದ್ದಾರೆ.

ಬೆಳಿಗ್ಗೆ ನಿರ್ಮಾಲ್ಯ ವಿಸರ್ಜನೆ ಮಾಡುವಾಗ ದ್ವಾರಪಾಲಾದಿ ನಮನಗಳನ್ನು ಮಾಡಿರುವದಿಲ್ಲ. ಹಾಗೆ, ಮಧ್ಯಾಹ್ನವೂ ಮೊದಲೇ ನಿರ್ಮಾಲ್ಯ ವಿಸರ್ಜನೆ ಮಾಡಬೇಕೆ ಎಂಬ ಪ್ರಶ್ನೆಗೆ ಉತ್ತರವಾಗಿ ಟೀಕಾಕೃತ್ಪಾದರು ಈ ವಿಧಿಯನ್ನು ತೋರಿಸಿದರು — ಮಧ್ಯಾಹ್ನ ನಿರ್ಮಾಲ್ಯವಿಸರ್ಜನೆ ಮಾಡುವದಾದರೆ, ದ್ವಾರಪಾಲಾದಿ ನಮನಗಳನ್ನು ಮಾಡಿಯೇ ನಿರ್ಮಾಲ್ಯ ವಿಸರ್ಜನೆ ಮಾಡಬೇಕು ಎಂದು.

ಮಧ್ಯಾಹ್ನ ನಿರ್ಮಾಲ್ಯ ವಿಸರ್ಜನೆ ಮಾಡುತ್ತಿರುವದಕ್ಕಾಗಿ ದೇವರ ಬಳಿ ಕ್ಷಮಾಯಾಚನೆಯನ್ನೂ ಮಾಡಬೇಕು, ದ್ವಾರಪಾಲಾದಿ ನಮನ, ಬ್ರಹ್ಮಪಾರಸ್ತವ, ಘಂಟಾನಾದಗಳನ್ನು ಮಾಡಿಯೇ ನಿರ್ಮಾಲ್ಯವನ್ನು ಮಾಡಬೇಕು, ಪೂಜೆಯಿಲ್ಲದೇ ಇರಬಾರದು ಎನ್ನುವದು ತಾತ್ಪರ್ಯ.

## ಬೆಳಿಗ್ಗೆ ಅರ್ಪಿಸಿದ ತುಳಸಿಯನ್ನು ತೆಗೆಯಬೇಕು

ಪದ್ಯಮಾಲಾದ ಪ್ರಾಚೀನ ವ್ಯಾಖ್ಯಾನಕಾರರು ನೀಡಿದ ಎರಡನೆಯ ಪರಿಹಾರವನ್ನೂ ಶ್ರೀ ಛಲಾರೀ ಆಚಾರ್ಯರು ಸಂಗ್ರಹಿಸಿದ್ದಾರೆ —

ಪ್ರಾತಃಕಾಲದಲ್ಲಿ ನಿರ್ಮಾಲ್ಯ ವಿಸರ್ಜನೆ ಮಾಡಿದ ನಂತರ ದೇವರಿಗೆ ಹೂ ತುಳಸಿಗಳನ್ನು ಸಮರ್ಪಿಸಿರುತ್ತೇವೆ. ಅದನ್ನು ತೆಗೆಯುವದನ್ನು ಟೀಕಾಕೃತ್ಪಾದರು ಇಲ್ಲಿ ವಿಧಿಸುತ್ತಿದ್ದಾರೆ.

**ಅಪೂರ್ವವಾದ ವಿಷಯ** — ದೇವರಿಗೆ ಪ್ರಾತಃಕಾಲ, ಮಧ್ಯಾಹ್ನ ಮತ್ತು ಸಾಯಂಕಾಲ ಮೂರೂ ಹೊತ್ತು ಪೂಜೆಯನ್ನು ಸಲ್ಲಿಸಬೇಕು ಎಂದು

ಶಾಸ್ತ್ರ ವಿಧಿಸುತ್ತದೆ. ಮುಖ್ಯವಾಗಿ ಪುಷ್ಪಾಂಜಲಿಯನ್ನು ಸಲ್ಲಿಸಬೇಕು ಎಂದು.

ನಾರದಪುರಾಣದ[3] ವಚನ ಹೀಗಿದೆ —

**ಪ್ರಾತರ್ಮಧ್ಯಂದಿನೇ ಸಾಯಂ**
**ವಿಷ್ಣುಪೂಜಾಂ ಸಮಾಚರೇತ್**
**ಯಥಾ ಸಂಧ್ಯಾ ಸ್ಮೃತಾ ನಿತ್ಯಾ**
**ವಿಷ್ಣುಪೂಜಾ ತಥಾ ಬುಧೈಃ**

**ಅಶಕ್ತೌ ವಿಸ್ತರೇಣೈವ**
**ಪ್ರಾತಃ ಸಂಪೂಜಯೇದ್ ಹರಿಮ್**
**ಮಧ್ಯಾಹ್ನೇ ಚೈವ ಸಾಯಂ ಚ**
**ಪುಷ್ಪಾಂಜಲಿಮಪಿ ಕ್ಷಿಪೇತ್**[4]

**ಮಧ್ಯಾಹ್ನೇ ವಿಸ್ತರೇಣೈವ**
**ಸಂಕ್ಷೇಪೇಣಾಥವಾ ಹರಿಮ್**
**ಸಂಪೂಜ್ಯ ಭೋಜನಂ ಕುರ್ಯಾತ್**
**ಅನ್ಯಥಾ ನರಕಂ ವ್ರಜೇತ್**

---

[3] ವೀರಮಿತ್ರೋದಯದ ಪೂಜಾಪ್ರಕಾಶದ ಪುಟ ಮೂರರಲ್ಲಿ ಉದ್ಧೃತ .

[4] ಪುಷ್ಪಾಂಜಲಿಮಪಿ ಕ್ಷಿಪೇತ್, ಪುಷ್ಪಾಂಜಲಿಂ ಕ್ಷಿಪೇದೇವ। ಅಪಿರೇವಾರ್ಥಃ

ಹೇಗೆ ಮೂರೂ ಹೊತ್ತು ಸಂಧ್ಯಾವಂದನೆ ಮಾಡಲೇಬೇಕೋ ಹಾಗೆ ಮೂರೂ ಹೊತ್ತು ದೇವರ ಪೂಜೆಯನ್ನು ಮಾಡಬೇಕು.

ಸಾಧ್ಯವಿಲ್ಲದಿದ್ದಲ್ಲಿ ಬೆಳಿಗ್ಗೆಯೇ ಪೂಜೆ ಮುಗಿಸಿ, ಮಧ್ಯಾಹ್ನ ಮತ್ತು ಸಂಜೆ ಪುಷ್ಪಾಂಜಲಿಯನ್ನು ಸಮರ್ಪಿಸಲೇಬೇಕು.

ಅಥವಾ ಮಧ್ಯಾಹ್ನ ವಿಸ್ತಾರಪೂಜೆಯನ್ನು ಮಾಡಿ ಬೆಳಿಗ್ಗೆ ಸಂಜೆ ಪುಷ್ಪಾಂಜಲಿಯನ್ನು ಸಮರ್ಪಿಸಲೇಬೇಕು.

**ತ್ರಿಕಾಲಮರ್ಚಯೇದ್ ವಿಷ್ಣುಂ**
**ಭಕ್ತ್ಯಾ ವೈ ಪುರುಷೋತ್ತಮಮ್**

ಹೀಗೆ ಪ್ರಾತಃಕಾಲದಲ್ಲಿ ನಿರ್ಮಾಲ್ಯ ವಿಸರ್ಜನೆಯ ನಂತರ ಪುಷ್ಪಾಂಜಲಿ ಸಮರ್ಪಣೆ.

ಮಧ್ಯಾಹ್ನದ ಪೂಜೆಯಲ್ಲಿ ಸಮರ್ಪಣೆ.

ಸಂಜೆ ದೇವರ ಪೆಟ್ಟಿಗೆಗೆ ಪುಷ್ಪಾಂಜಲಿ ಸಮರ್ಪಣೆ.

ಹೀಗಾಗಿ ಪ್ರಾತಃಕಾಲದಲ್ಲಿ ನಿರ್ಮಾಲ್ಯ ವಿಸರ್ಜನೆಯ ನಂತರ ಸಮರ್ಪಿಸಿರುವ ತುಳಸೀ ಪುಷ್ಪಗಳನ್ನು ತೆಗೆಯಬೇಕು ಎನ್ನುವದು ಟೀಕಾಕೃತ್ಪಾದರ ಅಭಿಪ್ರಾಯ ಎಂದು ಶೇಷಾಚಾರ್ಯರು ತಿಳಿಸುತ್ತಾರೆ.

## ಎಲ್ಲದರ ಸಂಗ್ರಹ

ಹೀಗೆ ನಿರ್ಮಾಲ್ಯತುಳಸೀಪುಷ್ಪಗಳ ವಿಸರ್ಜನೆಯನ್ನು ಅರುಣೋದಯ ಕಾಲದಲ್ಲಿ ಮಾಡಬೇಕು ಎಂದು ಪಂಚರಾತ್ರ, ಸಂನ್ಯಾಸಪದ್ಧತಿ, ಮಧ್ವವಿಜಯಗಳು ತಿಳಿಸುತ್ತವೆ.

ಸೂರ್ಯೋದಯವಾದ ಮೂರು ಗಂಟೆಯ ನಂತರ ಮಾಡಿದಲ್ಲಿ ಪ್ರಾಯಶ್ಚಿತ್ತವೇ ಇಲ್ಲ ಎಂದು ಪಂಚರಾತ್ರ ಹೇಳಿದಾಗ, ಪಾಪ ಬರುತ್ತದೆಂದು ಬಿಡುವಂತಿಲ್ಲ. ಮಾಡಲೇಬೇಕು. ಆದರೆ ಮಧ್ಯಾಹ್ನ ಮಾಡುವಾಗ ಅದನ್ನು ಗಂಟಾವಾದನದ ನಂತರವೇ ಮಾಡಬೇಕು ಎಂದು ಟೀಕಾಕೃತ್ಪಾದರು ತಿಳಿಸುತ್ತಾರೆ.

ಇದು ಒಂದು ಪರಿಹಾರ.

ಎರಡನೆಯ ಪರಿಹಾರ — ಹಿಂದಿನ ದಿವಸದ ನಿರ್ಮಾಲ್ಯತುಳಸೀ ಪುಷ್ಪಗಳ ವಿಸರ್ಜನೆ ಅರುಣೋದಯ ಕಾಲದಲ್ಲಿ. ಅದನ್ನು ಪಂಚರಾತ್ರಾದಿ ಗ್ರಂಥಗಳು ಹೇಳುತ್ತಿವೆ.

ನಿರ್ಮಾಲ್ಯವಿಸರ್ಜನೆಯ ನಂತರ ದೇವರಿಗೆ ಸಮರ್ಪಿಸಿದ ತುಳಸೀಪುಷ್ಪಾಂಜಲಿಯನ್ನು ಮಧ್ಯಾಹ್ನ ಪೂಜೆಯ ಕಾಲದಲ್ಲಿ ಗಂಟಾವಾದನದ ನಂತರ ತೆಗೆಯ ಬೇಕು ಎನ್ನುವದನ್ನು ಟೀಕಾಕೃತ್ಪಾದರು ಹೇಳುತ್ತಿದ್ದಾರೆ.

ಹೀಗಾಗಿ ಪದ್ಯಮಾಲಾಕ್ಕೂ ಪಂಚರಾತ್ರ-ಸಂನ್ಯಾಸಪದ್ಧತಿ-ಮಧ್ವವಿಜಯಗಳಿಗೂ ಸರ್ವಥಾ ವಿರೋಧವಿಲ್ಲ.

ಮುಂದಿನ ಲೇಖನದಲ್ಲಿ ನಿರ್ಮಾಲ್ಯ ವಿಸರ್ಜನೆಯ ಕ್ರಮವನ್ನು ತಿಳಿಯೋಣ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491